ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY

Azadi Ka Amrit Mahotsav

NAAC Accredited with "A" Grade 2022

**ಸಿಂಡಿಕೇಟ ವಿಭಾಗ**

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-71/2026-27/58 ದಿನಾಂಕ: 30 JUN 2026

**:: ಸಿಂಡಿಕೇಟ ಸಭೆಯ ನಡಾವಳಿಗಳು ::**

ಕರ್ನಾಟಕ ವಿಶ್ವವಿದ್ಯಾಲಯದ 2026-27ನೇ ಸಾಲಿನ 02 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 29 ಜೂನ್, 2026 ರಂದು ಮುಂಜಾನೆ 11:00 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ.(ಶ್ರೀಮತಿ).ಸುಧಾ.ಎಸ್. ಕೌಜಗೇರಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ | ಸದಸ್ಯರು |
| 3) | ಶ್ರೀ. ಸಂಜಯ ಕಪಟಕರ, ಧಾರವಾಡ | ಸದಸ್ಯರು |
| 4) | ಶ್ರೀ. ಸದಾನಂದ ಚಿಂತಾಮಣಿ, ಕಲಘಟಗಿ | ಸದಸ್ಯರು |
| 5) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 6) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 7) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 8) | ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಅಂಕೋಲಾ | ಸದಸ್ಯರು |
| 9) | ಡಾ(ಶ್ರೀಮತಿ). ಎಚ್. ಎಸ್. ಅನುಪಮ, ಹೊನ್ನಾವರ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 10) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 11) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 12) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 13) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ | ಸದಸ್ಯರು |
| 14) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 15) | ಡಾ(ಶ್ರೀಮತಿ), ಎಸ್. ಬಿ. ಮುನೋಳಿ, ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| 16) | ಡಾ. ಎ. ಎಮ್. ಕಡಕೋಳ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 17) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 18) | ಡಾ. ಮೃತ್ಯುಂಜಯ ಎಚ್. ಅಗಡಿ, ಪ್ರಭಾರ ಕುಲಸಚಿವರು (ಆಡಳಿತ) ಮತ್ತು ಡೀನರು ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 18 ಜನ ಸದಸ್ಯರುಗಳು (01 ಸದಸ್ಯರು ಆನ್‌ಲೈನ್ ಮತ್ತು 17 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

**ಕುಲಸಚಿವರು** **ಕುಲಪತಿಗಳು**

## : ದಿನಾಂಕ 29.06.2026 ರಂದು ಜರುಗಿದ ಸಾಧಾರಣ ಸಿಂಡಿಕೇಟ ಸಭೆ :

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ಜಂಟೀ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಧಾರವಾಡ ಇವರನ್ನು ಸದಸ್ಯರೆಂದು ಸ್ವಾಗತಿಸುವುದು.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಬಿ) ರ ಅಡಿಯಲ್ಲಿ **ಡಾ.(ಶ್ರೀಮತಿ).ಸುಧಾ.ಎಸ್. ಕೌಜಗೇರಿ,** ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಧಾರವಾಡ ಇವರನ್ನು ದಿನಾಂಕ: 10.06.2026 ರಿಂದ ಅನ್ವಯವಾಗುವಂತೆ ಸಿಂಡಿಕೇಟ ಸಭೆಗೆ ಸದಸ್ಯರೆಂದು ನಾಮನಿರ್ದೇಶನ ಮಾಡಲಾಗಿದ್ದು, ಇವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತಿಸಲಾಯಿತು.

**ಸಿಂಡಿಕೇಟ ಸದಸ್ಯರ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಬಿ) ರ ಅಡಿಯಲ್ಲಿ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ **ಶ್ರೀ. ಕೇಶವ.ಎಚ್. ಮಾಜಿ ಹೆಚ್ಚುವರಿ ಜಂಟಿ ನಿರ್ದೇಶಕರು,** ಇವರ ಅಧಿಕಾರ ಅವಧಿ ದಿನಾಂಕ: 09.06.2026 ರಂದು ಕೊನೆಗೊಂಡ ಪ್ರಯುಕ್ತ ಸಿಂಡಿಕೇಟ ಸದಸ್ಯತ್ವವು ಕೊನೆಗೊಂಡಿರುತ್ತದೆ. ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃಧ್ದಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

-

-

-

-

-

-

-

-

-

-

**ಕುಲಸಚಿವರು** **ಕುಲಪತಿಗಳು**

<table>
<tr><th>ಕಾರ್ಯಸೂಚಿ ಸಂಖ್ಯೆ</th><th>ವಿಷಯ</th></tr>
<tr><td rowspan="2">1)</td><td>A) ದಿನಾಂಕ 26.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ</td></tr>
<tr><td>ದಿನಾಂಕ 26.03.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು. ಈ ಕೆಳಕಂಡ 07 ನೇ ನಿರ್ಣಯವನ್ನು ತಿದ್ದುಪಡೆ ಮಾಡಿ, ಉಳಿದ ಎಲ್ಲ ನಿರ್ಣಯಗಳ ಮೇಲೆ ಜರುಗಿದ ಕ್ರಮದ ಸಂಕ್ಷಿಪ್ತ ವರದಿಯನ್ನು ಒಪ್ಪಲಾಯಿತು.
<table>
<tr><th>ನಿರ್ಣಯ ಸಂಖ್ಯೆ</th><th>ದಾಖಲಾದ ನಿರ್ಣಯ</th><th>ತಿದ್ದುಪಡೆಗೊಂಡ ನಿರ್ಣಯ</th></tr>
<tr><td>07</td><td>ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆ, ಸ್ನಾತಕೋತ್ತರ ಶಾಖೆಗಳಿಗೆ ಎನ್.ಇ.ಪಿ. ಸ್ನಾತಕ/ ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ನಾನ್-ಸಿಬಿಸಿಎಸ್ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣಪತ್ರಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯು ತೆಗೆದುಕೊಂಡ ನಿರ್ಣಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಹಣಕಾಸು ಅಧಿಕಾರಿಗಳು ಮತ್ತು ಕುಲಸಚಿವರು (ಮೌಲ್ಯಮಾಪನ) ಇವರಿಂದ MSIL ಬೆಂಗಳೂರು ಇವರಿಂದ ಖರೀದಿ ಮಾಡದೇ, ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ ಸೂಕ್ತ ಕಾರಣಗಳನ್ನು ಪಡೆದು ಕಡಿಮೆ ದರ ಮತ್ತು ಉತ್ತಮ ಗುಣಮಟ್ಟದ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಖರೀದಿಸಲು ಸೂಕ್ತವಾದದ್ದನ್ನು ಶಿಫಾರಸ್ಸು ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td><td>ಪರೀಕ್ಷಾ ವಿಭಾಗದ ಗಣಕಯಂತ್ರ ಶಾಖೆ, ಸ್ನಾತಕೋತ್ತರ ಶಾಖೆಗಳಿಗೆ ಎನ್.ಇ.ಪಿ. ಸ್ನಾತಕ/ ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ನಾನ್-ಸಿಬಿಸಿಎಸ್ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣಪತ್ರಗಳನ್ನು ಖರೀದಿಸಲು ದೊಡ್ಡ ಖರೀದಿ ಸಮಿತಿಯು ತೆಗೆದುಕೊಂಡ ನಿರ್ಣಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಹಣಕಾಸು ಅಧಿಕಾರಿಗಳು ಮತ್ತು ಕುಲಸಚಿವರು (ಮೌಲ್ಯಮಾಪನ) ಇವರಿಂದ MSIL ಬೆಂಗಳೂರು ಇವರಿಂದ ಖರೀದಿ ಮಾಡದೇ, ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ ಸೂಕ್ತ ಕಾರಣಗಳನ್ನು ಪಡೆದು ಕಡಿಮೆ ದರ ಮತ್ತು ಉತ್ತಮ ಗುಣಮಟ್ಟದ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣ ಪತ್ರಗಳನ್ನು ಖರೀದಿಸಲು ಅರ್ಹ ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಿ ಮುಂದಿನ ಕ್ರಮ ವಹಿಸಲು ಸಿಂಡಿಕೇಟ್ ಅನುಮೋದಿಸಿತು.</td></tr>
</table>
</td></tr>
</table>

[illegible signature] [illegible signature]

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| | B) ದಿನಾಂಕ 13.05.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು. |
| | ದಿನಾಂಕ 13.05.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವಾಗ ದಿನಾಂಕ 05.03.2026 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ: 02 ಮತ್ತು ದಿನಾಂಕ 13.05.2026 ರ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 05 ಮತ್ತು 18ಗಳನ್ನು ಕೆಳಗಿನಂತೆ ತಿದ್ದುಪಡೆ ಮಾಡಿ, ಅದರಂತೆ, ಉಳಿದ ನಿರ್ಣಯಗಳನ್ನು ಯಥಾವತ್ತಾಗಿ ದೃಢೀಕರಿಸಿತು. |

| ಸಿಂಡಿಕೇಟ ನಿರ್ಣಯ ಸಂಖ್ಯೆ/ ದಿನಾಂಕ | ದಾಖಲಾದ ನಿರ್ಣಯ | ತಿದ್ದುಪಡೆಗೊಂಡ ನಿರ್ಣಯ |
|---|---|---|
| 05.03.2026<br>02 | ಡಾ. (ಶ್ರೀಮತಿ) ನಿರುಪಮಾ ಜೆ.ಎಮ್. ಡಾ. (ಶ್ರೀಮತಿ) ಜ್ಯೋತಿ ದೊಡಮನಿ ಮತ್ತು ಡಾ. ಹರ್ಷಾ ಡಿ. ನೀಲಗುಂದ ಇವರಿಗೆ ದಿನಾಂಕ 16.11.2023ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಯುಜಿಸಿ ಸಿಎಎಸ್ ನಿಯಮಾವಳಿಗಳ ಅನ್ವಯ Academic Level 11 ರಿಂದ 12ಕ್ಕೆ ಪದೋನ್ನತಿ ನೀಡುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸದರಿಯವರ ನೇಮಕಾತಿ ಹೊಂದಿದ ದಿನಾಂಕದಿಂದ ಇಲ್ಲಿಯವರೆಗೆ ಸೇವಾ ದಾಖಲೆಗಳನ್ನು ವಿವರವಾದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಅನುಮೋದಿಸಿತು.<br>ಮುಂದುವರೆದು, ಸದರಿಯವರಿಂದ UNDERTAKING ಪಡೆದು, ಮುಂದಿನ ಕ್ರಮವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. | ಡಾ. (ಶ್ರೀಮತಿ) ನಿರುಪಮಾ ಜೆ.ಎಮ್. ಡಾ. (ಶ್ರೀಮತಿ) ಜ್ಯೋತಿ ದೊಡಮನಿ ಮತ್ತು ಡಾ. ಹರ್ಷಾ ಡಿ. ನೀಲಗುಂದ ಇವರಿಗೆ ದಿನಾಂಕ 16.11.2023ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಯುಜಿಸಿ ಸಿಎಎಸ್ ನಿಯಮಾವಳಿಗಳ ಅನ್ವಯ Academic Level 11 ರಿಂದ 12ಕ್ಕೆ ಪದೋನ್ನತಿ ನೀಡುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸದರಿಯವರ ನೇಮಕಾತಿ ಹೊಂದಿದ ದಿನಾಂಕದಿಂದ ಇಲ್ಲಿಯವರೆಗೆ ಸೇವಾ ದಾಖಲೆಗಳನ್ನು ವಿವರವಾದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಅನುಮೋದಿಸಿತು. ಮುಂದುವರೆದು, ಕಾನೂನು ಅಭಿಪ್ರಾಯದಂತೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣವಿರುವುದರಿಂದ UGC ನಿಯಮಾವಳಿಗಳಂತೆ ಹಾಗೂ ಸರ್ಕಾರದ ಆದೇಶ ED 37 UNE 2009 ದಿನಾಂಕ:24.12.2009 ರಂತೆ ಕ್ರಮವಹಿಸಲು ಸಿಂಡಿಕೇಟ್ ನಿರ್ಣಯಿಸಲಾಯಿತು. |

ಕುಲಸಚಿವರು  ಕುಲಪತಿಗಳು

| ಕಾರ್ಯಸೂಚಿ ಸಂಖ್ಯೆ | ವಿಷಯ | | |
|---|---|---|---|
| | 13.05.2026<br>05 | ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವಕೃತಿ ಚೌರ್ಯ (Self plagiarism) ಪ್ರಕರಣದ IAIP ಸಮಿತಿಯ ಸದಸ್ಯ ಕಾರ್ಯದರ್ಶಿಗಳು ದಿನಾಂಕ 31.03.2026ರ ಪತ್ರದ ಮೂಲಕ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್‌ದಲ್ಲಿ ತೆರೆದು ಓದಲಾಯಿತು. ಅದರಂತೆ, IAIP ಸಮಿತಿ ಸಲ್ಲಿಸಿದ ವರದಿಯನ್ನು ಒಪ್ಪಲಾಯಿತು. ಮುಂದುವರೆದು, ಸಮಿತಿ ಶಿಫಾರಸ್ಸಿನಂತೆ UGC ನಿಯಮಾವಳಿಗಳ ಪ್ರಕಾರ ಕ್ರಮ ಜರುಗಿಸಲು ಸಿಂಡಿಕೇಟ್ ನಿರ್ಣಯಿಸಿತು. | ಕೃತಿಚೌರ್ಯ ಪ್ರಕರಣ-2 (Plagiarism Case-II) ಹಾಗೂ ಸ್ವಕೃತಿ ಚೌರ್ಯ (Self plagiarism) ಪ್ರಕರಣದ IAIP ಸಮಿತಿಯ ಸದಸ್ಯ ಕಾರ್ಯದರ್ಶಿಗಳು ದಿನಾಂಕ 31.03.2026ರ ಪತ್ರದ ಮೂಲಕ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್‌ದಲ್ಲಿ ತೆರೆದು ಓದಲಾಯಿತು. ಅದರಂತೆ, IAIP ಸಮಿತಿ ಸಲ್ಲಿಸಿದ ವರದಿಯನ್ನು ಒಪ್ಪಲಾಯಿತು. ಮುಂದುವರೆದು, ಸಮಿತಿ ಶಿಫಾರಸ್ಸಿನಂತೆ UGC ನಿಯಮಾವಳಿಗಳ ಪ್ರಕಾರ ಕ್ರಮ ಜರುಗಿಸುವ ಮೊದಲು ಆಪಾದಿತರ ಮನವಿಗಳು ಹಾಗೂ copy right Act1957, KCSR ಹಾಗೂ ವಿವಿಯ CCA ನಿಯಮಾವಳಿಗಳಂತೆ ಒಬ್ಬ ನಿವೃತ್ತ ನ್ಯಾಯಾಧೀಶರ ಸಮಿತಿ ರಚಿಸಿ, ಈ ಪ್ರಕರಣವನ್ನು ಪುನರ್-ಪರಿಶೀಲಿಸಿ ವರದಿಯನ್ನು ಪಡೆಯಲು ಸಿಂಡಿಕೇಟ್ ನಿರ್ಣಯಿಸಿತು. |
| | 13.05.2026<br>18 | ಡಾ. ರಾಕೇಶ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು, ವಿವಿಯ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯ ಇವರು ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನ ಮಾಡಿರುವ ವಿಷಯದ ಕುರಿತು ಸಿಂಡಿಕೇಟ್ ಚರ್ಚಿಸಲಾಗಿ, ಸದರಿಯವರು ತಮ್ಮ ಸಂಬಂಧಿಕರಿದ್ದರು ಕೂಡ ಆಂತರಿಕ ಮೌಲ್ಯಮಾಪನ ಮಾಡಿರುವುದರಿಂದ, ಸದರಿ ವಿದ್ಯಾರ್ಥಿಯ ಜೊತೆ ಸಂಬಂಧದ ಬಗ್ಗೆ ಪರಿಶೀಲಿಸಿ ಜೂನ 15, 2026ರ | ಡಾ. ರಾಕೇಶ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು, ವಿವಿಯ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯ ಇವರು ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನ ಮಾಡಿರುವ ವಿಷಯದ ಕುರಿತು ಸಿಂಡಿಕೇಟ್ ಚರ್ಚಿಸಲಾಗಿ, ಸದರಿಯವರು ತಮ್ಮ ಸಂಬಂಧಿಕರಿದ್ದರು ಕೂಡ ಆಂತರಿಕ ಮೌಲ್ಯಮಾಪನ ಮಾಡಿರುವುದರಿಂದ, ಸದರಿ ವಿದ್ಯಾರ್ಥಿಯ ಜೊತೆ ಸಂಬಂಧದ ಬಗ್ಗೆ ಪರಿಶೀಲಿಸಿ ಜುಲೈ 15, 2026ರ ಒಳಗಾಗಿ ವರದಿಯನ್ನು ನೀಡಲು ಸಮಿತಿಯನ್ನು ರಚಿಸಲು |

ಕುಲಸಚಿವರು



ಕುಲಪತಿಗಳು

<table>
<tr><th>ಕಾರ್ಯಸೂಚಿ ಸಂಖ್ಯೆ</th><th>ವಿಷಯ</th></tr>
<tr><td></td><td>
<table>
<tr><td></td><td>ಒಳಗಾಗಿ ವರದಿಯನ್ನು ನೀಡಲು ಈ ಕೆಳಕಾಣಿಸಿದ ಸಮಿತಿಯನ್ನು ರಚಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>೧. ಕುಲಸಚಿವರು (ಮೌಲ್ಯಮಾಪನ) – ಅಧ್ಯಕ್ಷರು<br>೨. ಶ್ರೀ ರಾಬರ್ಟ ದದ್ದಾಪುರು, ಸಿಂಡಿಕೇಟ್ ಸದಸ್ಯ – ಸದಸ್ಯರು<br>೩. ಶ್ರೀ ಸಂಜಯ ಕಪಟಕರ, ಸಿಂಡಿಕೇಟ್ ಸದಸ್ಯ – ಸದಸ್ಯರು<br>೪. ಉಪಕುಲಸಚಿವರು – ಪರೀಕ್ಷಾ ವಿಭಾಗ – ಸಂಚಾಲಕರು<br>ಮುಂದುವರೆದು, ಡಾ. ರಾಕೇಶ ಕಾಂಬಳೆ, ಸಹಾಯಕ ಪ್ರಾಧ್ಯಾಪಕರು ಇವರಿಗೆ ನೀಡಿರುವ ಪರೀಕ್ಷಾ ಕಾರ್ಯಗಳನ್ನು ಸ್ಥಗಿತಗೊಳಿಸಬೇಕೆಂದು ತೀರ್ಮಾನಿಸಿತು.</td><td>ಸಿಂಡಿಕೇಟ್ ತೀರ್ಮಾನಿಸಿತು.<br>ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ Ordinance ನ ಪ್ರಕಾರ ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ಲೋಪದೋಷವಿದ್ದರೆ ordinance ನ ಪ್ರಕಾರ ಕ್ರಮವಹಿಸಬೇಕಾಗಿರುವುದರಿಂದ, ಅದರಂತೆ ಸಮಿತಿ ರಚಿಸಿ, ತನಿಖೆ ನಡೆಸುವುದು ಎಂದು ಸಿಂಡಿಕೇಟ್ ನಿರ್ಣಯಿಸಿತು.</td></tr>
</table>
</td></tr>
<tr><td></td><td>C) ದಿನಾಂಕ 29.05.2026 ರ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.</td></tr>
<tr><td></td><td>ದಿನಾಂಕ 29.05.2026 ರಂದು ಜರುಗಿದ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ಯಥಾವತ್ತಾಗಿ ದೃಢೀಕರಿಸಿತು.</td></tr>
<tr><td>2)</td><td>ವಿದ್ಯಾರ್ಥಿ ಕಲ್ಯಾಣ ವಿಭಾಗದ ನಿರ್ದೇಶಕರ ಹುದ್ದೆಗೆ ತಾತ್ಕಾಲಿಕವಾಗಿ ಪ್ರಭಾರ ವ್ಯವಸ್ಥೆ ಮೇರೆಗೆ ನೇಮಕಾತಿ ಮಾಡಲಾದ ಕುಲಪತಿಗಳ ಕ್ರಮವನ್ನು ದೃಢೀಕರಿಸುವ ಕುರಿತು ಹಾಗೂ ವಿದ್ಯಾರ್ಥಿ ಕಲ್ಯಾಣ ವಿಭಾಗಕ್ಕೆ ಪೂರ್ಣಕಾಲಿಕ ನಿರ್ದೇಶಕರ ನೇಮಕಾತಿ ವಿಷಯವನ್ನು ಪರಿಶೀಲಿಸುವ ಕುರಿತು.</td></tr>
<tr><td>ನಿರ್ಣಯ</td><td>ವಿದ್ಯಾರ್ಥಿ ಕಲ್ಯಾಣ ವಿಭಾಗದ ನಿರ್ದೇಶಕರ ಹುದ್ದೆಗೆ ಡಾ. ಸಂಗಪ್ಪ ಜಿ. ಚಲವಾದಿಯವರಿಗೆ ಪ್ರಭಾರ ನೀಡಿ ನೇಮಕಾತಿ ಮಾಡಿದ ಕ್ರಮವನ್ನು ಸಿಂಡಿಕೇಟ ಅನುಮೋದಿಸಿತು.</td></tr>
</table>

**ಕುಲಸಚಿವರು** **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| 3) | ಶ್ರೀ. ಮಂಜುನಾಥ ಗಂ. ಜಮ್ಮಿಹಾಳ, ಸಹಾಯಕರು, ವಿದ್ಯಾಮಂಡಳ (S&T) ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ತಮ್ಮ ಸ್ವಂತ ಅನಾರೋಗ್ಯದ ಸಲುವಾಗಿ ಚಿಕಿತ್ಸೆ ಪಡೆದ ವೈಧ್ಯಕೀಯ ವೆಚ್ಚ ರೂ.4,09,353/-ರ ಬಿಲ್ಲುಗಳನ್ನು ದಿನಾಂಕ: 28.01.2026 ರಂದು ಜರುಗಿದ ವೈದ್ಯಕೀಯ ಮಂಡಳಿಯಲ್ಲಿ ಪರಿಶೀಲಿಸಿ ರೂ. 1,74,242/- ಗಳನ್ನು ಸದರಿಯವರಿಗೆ ಮಂಜೂರು ಮಾಡಿ ಶಿಫಾರಸ್ಸು ಮಾಡಿರುವ ವಿಷಯವನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | ಶ್ರೀ. ಮಂಜುನಾಥ ಗಂ. ಜಮ್ಮಿಹಾಳ, ಸಹಾಯಕರು, ವಿದ್ಯಾಮಂಡಳ (S&T) ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ತಮ್ಮ ಸ್ವಂತ ಅನಾರೋಗ್ಯದ ಸಲುವಾಗಿ ಚಿಕಿತ್ಸೆ ಪಡೆದ ವೈಧ್ಯಕೀಯ ವೆಚ್ಚ ರೂ. 4,09,353/-ರ ಬಿಲ್ಲುಗಳನ್ನು ದಿನಾಂಕ 28.01.2026 ರಂದು ಜರುಗಿದ ವೈದ್ಯಕೀಯ ಮಂಡಳಿಯಲ್ಲಿ ರೂ. 1,74,242/- ಗಳನ್ನು ಮಂಜೂರು ಮಾಡಿ ಶಿಫಾರಸ್ಸು ಮಾಡಿರುವ ಕ್ರಮವನ್ನು ಸಿಂಡಿಕೇಟ ಅನುಮೋದಿಸಿತು. |
| 4) | Consideration of the request letter dated 24.04.2026 received from the Chairman, P.G.Department of studies in Physics, K.U.Dharwad regarding continuation of Dr.S.R.Inamadar, Retd. Professor as Adjunct Professor from 01.02.2026. |
| ನಿರ್ಣಯ | Syndicate considered the request letter dated 24.04.2026 received from the Chairman, P.G.Department of Studies in Physics, K.U.Dharwad and Resolved to continue Dr. S.R. Inamadar, Retd. Professor as Adjunct Professor w.e.f from 01.02.2026 for a period of one year with honorarium of Rs.20,000/- per month. |
| 5) | ಮೇ-2026 ರಲ್ಲಿ ಹಿಂದಿ ಮತ್ತು ಸಮಾಜಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| ನಿರ್ಣಯ | ಮೇ-2026 ರಲ್ಲಿ ಹಿಂದಿ ಮತ್ತು ಸಮಾಜಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿದ ಕ್ರಮವನ್ನು ಸಿಂಡಿಕೇಟ ಅನುಮೋದಿಸಿತು. |
| 6) | ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರಭಾರ ಮುಖ್ಯಸ್ಥರ ನೇಮಕ ಮಾಡಿದ ಮಾನ್ಯ ಕುಲಪತಿಗಳ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| ನಿರ್ಣಯ | ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರಭಾರ ಮುಖ್ಯಸ್ಥರ ನೇಮಕ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. |

ಕುಲಸಚಿವರು



ಕುಲಪತಿಗಳು

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| **7)** | ಕರ್ನಾಟಕ ವಿಶ್ವವಿದ್ಯಾಲಯದ "ಸಿ" ಮತ್ತು "ಡಿ" ದರ್ಜೆಯ ಹಾಗೂ ಭದ್ರತಾ ಗುತ್ತಿಗೆ ನೌಕರರಿಗೆ ಸರ್ಕಾರದ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನ ಪಾವತಿಸುವ ವಿಷಯವಾಗಿ ಸಿಂಡಿಕೇಟ ಸಭೆಯು ಪರಿಶೀಲಿಸುವ ಕುರಿತು. |
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ "ಸಿ" ಮತ್ತು "ಡಿ" ದರ್ಜೆಯ ಹಾಗೂ ಭದ್ರತಾ ಗುತ್ತಿಗೆ ನೌಕರರಿಗೆ ಸರ್ಕಾರದ ಅಧಿಸೂಚನೆಯಂತೆ ಪರಿಷ್ಕೃತ ಕನಿಷ್ಠ ವೇತನ ಪಾವತಿಸುವ ವಿಷಯವಾಗಿ ಸಿಂಡಿಕೇಟ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ, ಕೂಡಲೇ ಕಾರ್ಮಿಕ ಇಲಾಖೆಯಿಂದ ಈ ಬಗ್ಗೆ ಸ್ಪಷ್ಟೀಕರಣ ಪಡೆದು ಮುಂದಿನ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟ್ ನಿರ್ಣಯಿಸಿತು. |
| **8)** | ಕರ್ನಾಟಕ ವಿಶ್ವವಿದ್ಯಾಲಯದ ಮುಂಬರುವ 76ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀಧಿಸುವ ಕುರಿತು ದಿನಾಂಕ: 02.06.2026 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆಯ ಕಲಂ ನಂ.3 ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಮುಂಬರುವ 76ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣಪದಕಗಳನ್ನು ಇ-ಟೆಂಡರ್ ಮೂಲಕ ಖರೀದಿಸುವ ಕುರಿತು ದಿನಾಂಕ 02.06.2026 ರಂದು ಜರುಗಿದ ದೊಡ್ಡ ಖರೀದಿ ಸಮಿತಿ ಸಭೆಯ ಕಲಂ ನಂ.3 ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಪರಿಶೀಲಿಸಿ ಅನುಮೋದಿಸಿತು |
| **9)** | ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಮನಃಶಾಸ್ತ್ರ ವಿಷಯದಲ್ಲಿ (1 ರಿಂದ 6ನೇ ಸೆಮಿಸ್ಟರದಲ್ಲಿ) ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Indian Association of Mental Health (IAMH)" ಎಂಬ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ನಗದು ಪಾರಿತೋಷಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ದಿನಾಂಕ 31.03.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ.07ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಅನುಮೋದಿಸುವ ಕುರಿತು.<br>-<br>- |

**ಕುಲಸಚಿವರು** **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಮನಃಶಾಸ್ತ್ರ ವಿಷಯದಲ್ಲಿ (1 ರಿಂದ 6ನೇ ಸೆಮಿಸ್ಟರದಲ್ಲಿ) ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Indian Association of Mental Health (IAMH)" ಎಂಬ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ನಗದು ಪಾರಿತೋಷಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ದಿನಾಂಕ 31.03.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ.07ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಅನುಮೋದಿಸಿತು. |
| **10)** | ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಮನಃಶಾಸ್ತ್ರ (Clinical Psychology Specialization) ಅಧ್ಯಯನದ ಪದವಿಯಲ್ಲಿ (3 ರಿಂದ 4ನೇ ಸೆಮಿಸ್ಟರದಲ್ಲಿ) ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Professor P.S. Halyal" ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣ ಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ದಿನಾಂಕ 31.03.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ-06ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯಲ್ಲಿ ಅನುಮೋದಿಸುವ ಕುರಿತು. |
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಮನಃಶಾಸ್ತ್ರ (Clinical Psychology Specialization) ಅಧ್ಯಯನದ ಪದವಿಯಲ್ಲಿ (3 ರಿಂದ 4ನೇ ಸೆಮಿಸ್ಟರದಲ್ಲಿ) ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ "Professor P.S. Halyal" ಇವರ ಹೆಸರಿನಲ್ಲಿ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಸುವರ್ಣ ಪದಕವನ್ನು ಪ್ರದಾನ ಮಾಡುವ ಕುರಿತು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ದಿನಾಂಕ 31.03.2026 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆ ಕಲಂ ನಂ. 06ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ ಅನುಮೋದಿಸಿತು. |
| **11)** | ಮಾನ್ಯ ಕುಲಪತಿಗಳ ದಿ. 29/05/2026ರ ಆದೇಶದ ಮೇರೆಗೆ ಹಳೆ ದರಗಳ ಮೇಲೆ ಶೇ.5ರಷ್ಟು ಹೆಚ್ಚಿಗೆ ದರ ನಿಗದಿಪಡಿಸಿದಂತೆ, ಆದ್ಯತೆ ಮೇರೆಗೆ ಹಳೆ ಉತ್ತರ ಪತ್ರಿಕೆಗಳ ವಿಲೇವಾರಿ & ಮೌಲ್ಯಮಾಪನ ಕೊಠಡಿಗಳಲ್ಲಿ ಕೂಡಿಟ್ಟ ನಿರುಪಯುಕ್ತ ಬಾಹ್ಯ ಪರೀಕ್ಷಾ ವಿಭಾಗದ ಸುಮಾರು ವರ್ಷ ಹಳೆಯ ಪಠ್ಯಕ್ರಮ & ಪರಿಚಯ ಪುಸ್ತಕಗಳ ವಿಲೇವಾರಿ ಮಾಡಿ ರೂ.4,97,983-00 ಶ್ರೀ ಶಂಕರ್ ಟ್ರೇಡರ್ಸ್, ಧಾರವಾಡ ಇವರು ಪಾವತಿಸಿದ ವಿಷಯವಾಗಿ ಘಟನೋತ್ತರ ಅನುಮೋದನೆ/ಧೃಢೀಕರಣ ಕುರಿತು. |

**ಕುಲಸಚಿವರು** **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| **ನಿರ್ಣಯ** | ಹಳೆಯ ಉತ್ತರ ಪತ್ರಿಕೆಗಳ ವಿಲೇವಾರಿ & ಮೌಲ್ಯಮಾಪನ ಕೊಠಡಿಗಳಲ್ಲಿ ಕೂಡಿಟ್ಟ ನಿರುಪಯುಕ್ತ ಬಾಹ್ಯ ಪರೀಕ್ಷಾ ವಿಭಾಗದ ಸುಮಾರು ವರ್ಷ ಹಳೆಯ ಪಠ್ಯಕ್ರಮ & ಪರಿಚಯ ಪುಸ್ತಕಗಳ ವಿಲೇವಾರಿ ಮಾಡುವ ವಿಷಯವಾಗಿ ಕುಲಸಚಿವರು (ಮೌಲ್ಯಮಾಪನ) ಅವರು ಮೌಲ್ಯಮಾಪನಕ್ಕಾಗಿ ಹೆಚ್ಚುವರಿ ಕೊಠಡಿಗಳು ಬೇಕೆಂದು ವಿನಂತಿಸಿದ ಹಿನ್ನಲೆಯಲ್ಲಿ ಹಣಕಾಸು ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಹಿಂದೆ ನೀಡಿದ ಆದೇಶದಂತೆ ಶ್ರೀ ಶಂಕರ ಟ್ರೇಡರ್ಸ್, ಧಾರವಾಡ ಇವರಿಂದ ಹೆಚ್ಚುವರಿ ಶೇಕಡಾ 05ರ ದರದಲ್ಲಿ ವಿಲೇವಾರಿ ಮಾಡಿ ರೂ.4,97,983-00 ಗಳನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಕ್ರಮವನ್ನು ಸಿಂಡಿಕೇಟ್ ಘಟನೋತ್ತರವಾಗಿ ಅನುಮೋದಿಸಿತು. |
| **12)** | ಸನ್ 2026-27ನೇ ಸಾಲಿನಿಂದ ಸ್ನಾತಕ ವೃತ್ತಿಪರ ಮತ್ತು ವೃತ್ತಿಪರೇತರ ಕೋರ್ಸುಗಳ ಶುಲ್ಕಗಳನ್ನು ಪರಿಷ್ಕರಿಸಿ ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳಿಗೆ ಪರಿಷ್ಕರಿಸಲಾದ ಶುಲ್ಕದ ಅಧಿಸೂಚನೆಯನ್ನು ಹೊರಡಿಸಲು ಆದೇಶಿಸಿದ ಮಾನ್ಯ ಕುಲಪತಿಗಳ ಆಡಳಿತಾತ್ಮಕ ಕ್ರಮದ ದೃಡೀಕರಣಕ್ಕಾಗಿ ಮಂಡಿಸಿದ ಕುರಿತು |
| **ನಿರ್ಣಯ** | ಸನ್ 2026-27ನೇ ಸಾಲಿನಿಂದ ಸ್ನಾತಕ ವೃತ್ತಿಪರ ಮತ್ತು ವೃತ್ತಿಪರೇತರ ಕೋರ್ಸುಗಳ ಶುಲ್ಕಗಳನ್ನು ಪರಿಷ್ಕರಿಸಿ ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳಿಗೆ ಪರಿಷ್ಕರಿಸಲಾದ ಶುಲ್ಕದ ಅಧಿಸೂಚನೆಯನ್ನು ಹೊರಡಿಸಿದ ಕ್ರಮವನ್ನು ಸಿಂಡಿಕೇಟ್ ದೃಡೀಕರಿಸಿತು. |
| **13)** | Item for permission to attend International Conference to be held in Swansea University, Bay Campus, United Kingdom to present the research paper and for financial assistance. |
| **ನಿರ್ಣಯ** | Syndicate permitted to Dr.(Smt). Renuka E. Asagi, Assistant Professor, Dept. of Social Work, K.U. Dharwad to attend International Conference to be held in Swansea University, Bay Campus, United Kingdom to present the research paper from 1st July 2026 to 3rd July 2026.<br>Further, Syndicate recommended an amount of Rs. 75,000/- for financial assistance from the University under the Budget Head No:1436. |
| **14)** | Item for permission to attend International Conference to be held in Swansea University, Bay Campus, United Kingdom to present the research paper and for financial assistance. |

**ಕುಲಸಚಿವರು** **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| ನಿರ್ಣಯ | Syndicate permitted Dr.(Smt). S. R. Mane, Professor, Dept. of Social Work, K.U. Dharwad to attend International Conference to be held in Swansea University, Bay Campus, United Kingdom to present the research paper from 1st July 2026 to 3rd July 2026.<br>Further, Syndicate recommended an amount of Rs. 75,000/- for financial assistance from the University under the Budget Head No:1436. |
| 15) | ಹುಬ್ಬಳ್ಳಿ ವಿದ್ಯುತ ಸರಬರಾಜು ಕಂಪನಿ ನಿಯಮಿತ, ಧಾರವಾಡ ಇವರಿಗೆ ಕೆಸಿಡಿ ಆವರಣದಲ್ಲಿ 5 ಗುಂಟೆ ಜಾಗವನ್ನು ನೀಡುವ ಕುರಿತು. ಸಿಂಡಿಕೇಟ ಸಭೆಯಲ್ಲಿ ಪರಿಶೀಲಿಸುವ ಕುರಿತು. |
| ನಿರ್ಣಯ | ಹುಬ್ಬಳ್ಳಿ ವಿದ್ಯುತ ಸರಬರಾಜು ಕಂಪನಿ ನಿಯಮಿತ, ಧಾರವಾಡ ಇವರಿಗೆ ಕೆಸಿಡಿ ಆವರಣದಲ್ಲಿ 5 ಗುಂಟೆ ಜಾಗವನ್ನು ನೀಡುವ ಕುರಿತು. ಸಿಂಡಿಕೇಟ ಸಭೆಯಲ್ಲಿ ಪರಿಶೀಲಿಸಿ, ಕರ್ನಾಟಕ ಮಹಾವಿದ್ಯಾಲಯದಲ್ಲಿ ಹೆಚ್ಚುವರಿ ಜಾಗ ಇಲ್ಲದಿರುವುದರಿಂದ ಮತ್ತು ಮಹಾವಿದ್ಯಾಲಯ ವಿಸ್ತರಣೆಗೆ ಜಾಗ ಬೇಕಾಗಿರುವುದರಿಂದ ವಿಶ್ವವಿದ್ಯಾಲಯದ ಜಾಗವನ್ನು ನೀಡಲು ಸಾಧ್ಯವಿಲ್ಲ ಎಂದು ನಿರ್ಣಯಿಸಿತು. ಮುಂದುವರೆದು, ಆ ಪರಿಸರದಲ್ಲಿ ಖಾಲಿಯಾದ ಯಾವುದಾದರು ವಸತಿಗೃಹವಿದ್ದರೆ ಬಾಡಿಗೆ ಮೇರೆಗೆ ನೀಡಬಹುದು ಎಂದು ಸಿಂಡಿಕೇಟ್ ನಿರ್ಣಯಿಸಿತು. |
| 16) | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಕ್ಯಾಂಪಸ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಳಿಗಾಗಿ ಗ್ರಂಥಾಲಯ / ಅಧ್ಯಯನ ಕೇಂದ್ರ ಕಟ್ಟಡ ನಿರ್ಮಾಣ ಮಾಡುವ ಕುರಿತು ಸಿಂಡಿಕೇಟ ಸಭೆಯಲ್ಲಿ ಪರಿಶೀಲಿಸುವ ಕುರಿತು. |
| ನಿರ್ಣಯ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಕ್ಯಾಂಪಸ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಳಿಗಾಗಿ ಗ್ರಂಥಾಲಯ / ಅಧ್ಯಯನ ಕೇಂದ್ರ ಕಟ್ಟಡ ನಿರ್ಮಾಣ ಮಾಡುವ ವಿಷಯವನ್ನು ಸಿಂಡಿಕೇಟ್‌ದಲ್ಲಿ ಪ್ರಸ್ತಾಪಿಸಿದಾಗ, ಈಗಾಗಲೇ KSHEC ಯಿಂದ ಸಮಿತಿ ಬಂದು ಪರಿಶೀಲಿಸಿದ್ದು ಉದಯ ಹಾಸ್ಟೇಲ್ ಸಮೀಪ ರೈಲ್ವೇ ನಿಲ್ದಾಣಕ್ಕೆ ಹೋಗುವ ದಾರಿಯ ಎಡಭಾಗ ಕೆಲವು ಅನುಪಯುಕ್ತ ಸ್ಥಿತಿಯಲ್ಲಿ ವಸತಿಗೃಹಗಳಿದ್ದು, ಆ ಜಾಗವನ್ನು ನೀಡಬಹುದಾಗಿದ್ದರಿಂದ, ಸರ್ಕಾರಕ್ಕೆ ಆ ಜಾಗವನ್ನು ತೋರಿಸಿ ನೀಡಲು ಸಿಂಡಿಕೇಟ್ ನಿರ್ಣಯಿಸಿತು. |
| 17) | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಕಟ್ಟಡ ನಿರ್ಮಿಸಲು ಸ್ಥಳ ಒದಗಿಸುವ ಕುರಿತು ಸಿಂಡಿಕೇಟ ಸಭೆಯಲ್ಲಿ ಪರಿಶೀಲಿಸುವ ಕುರಿತು. |

ಕುಲಸಚಿವರು ಕುಲಪತಿಗಳು

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಕಟ್ಟಡ ನಿರ್ಮಿಸಲು ಸ್ಥಳ ಒದಗಿಸುವ ವಿಷಯವು ಸಿಂಡಿಕೇಟ ಸಭೆಯಲ್ಲಿ ಪ್ರಸ್ತಾಪಿಸಿದಾಗ ಗಾಂಧಿಭವನದ ಹಿಂಬದಿ ಗ್ರಂಥಾಲಯಕ್ಕೆ ಹೋಗುವ ದಾರಿಯ ಹತ್ತಿರ ಎರಡು ಎಕರೆ ಜಾಗವನ್ನು ನೀಡಬಹುದು ಎಂದು ಸಿಂಡಿಕೇಟ್ ಒಪ್ಪಿಗೆ ನೀಡಿತು. |
| **18)** | ಡಾ. ದೇವರಾಜನ ತಂಗದುರ್ಯೆ, ಪ್ರಾಧ್ಯಾಪಕರು(ಅಮಾನತ್ತು), ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ದೃಡೀಕರಿಸುವ ಕುರಿತು. |
| **ನಿರ್ಣಯ** | ಡಾ. ದೇವರಾಜನ ತಂಗದುರ್ಯೆ, ಪ್ರಾಧ್ಯಾಪಕರು(ಅಮಾನತ್ತು), ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ನಿಯಮಾನುಸಾರ ಅಮಾನತ್ತುಗೊಳಿಸಿದ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿತು. |
| **19)** | ನಿವೃತ್ತ ಪ್ರಾಧ್ಯಾಪಕರಾದ ಡಾ.ಎಂ.ಕೆ.ರಬಿನಾಳ ಇವರನ್ನು ಜೂನ್ 2025 ರಿಂದ ಅನ್ವಯವಾಗುವಂತೆ ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಡಾ.ಜೆ.ಎಸ್.ಭಟ್ ಇವರನ್ನು ಕೂಡಲೇ ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗಕ್ಕೆ ಅಡ್ಜಂಕ್ಟ್ ಪ್ರೊಫೆಸರ್ ಎಂದು ನೇಮಕ ಮಾಡುವ ಕುರಿತು ಮುಖ್ಯಸ್ಥರು, ಭೌತಶಾಸ್ತ್ರ ವಿಭಾಗ, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರ ಸಂ.86 ದಿನಾಂಕ 15.06.2026 ನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | ಮುಖ್ಯಸ್ಥರು, ಭೌತಶಾಸ್ತ್ರ ವಿಭಾಗ, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರ ಸಂ.86 ದಿನಾಂಕ 15.06.2026 ನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಡಾ.ಎಂ.ಕೆ.ರಬಿನಾಳ, ನಿವೃತ್ತ ಪ್ರಾಧ್ಯಾಪಕರು, ಇವರನ್ನು ಜೂನ್ 2025 ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ಭೌತಶಾಸ್ತ್ರ ವಿಭಾಗದಲ್ಲಿ ಕವಿವಿ ಅನುಶಾಸನದಲ್ಲಿ ಕಲ್ಪಿಸಲಾದ ಅವಕಾಶಗಳ ಪ್ರಕಾರ ಪ್ರತಿ ತಿಂಗಳು ರೂ.20,000/-ರಂತೆ ಸಂಭಾವನೆಯೊಂದಿಗೆ ಅಡ್ಜಂಕ್ಟ್ ಪ್ರೊಫೆಸರ್ ಎಂದು ನೇಮಕ ಮಾಡಲು ನಿರ್ಣಯಿಸಲಾಯಿತು.<br><br>ಮುಂದುವರೆದು, ಡಾ.ಜೆ.ಎಸ್.ಭಟ್, ನಿವೃತ್ತ ಪ್ರಾಧ್ಯಾಪಕರು, ಇವರನ್ನು ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗಕ್ಕೆ ಕವಿವಿ ಅನುಶಾಸನದಲ್ಲಿ ಕಲ್ಪಿಸಲಾದ ಅವಕಾಶಗಳ ಪ್ರಕಾರ ಪ್ರತಿ ತಿಂಗಳು ರೂ.20,000/-ರಂತೆ ಸಂಭಾವನೆಯೊಂದಿಗೆ ಅವರು ಹಾಜರಾಗುವ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಡ್ಜಂಕ್ಟ್ ಪ್ರೊಫೆಸರ್ ಎಂದು ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **20)** | ಶ್ರೀ. ಶರೀಫ ಶಿವಯೋಗಿ ಮತ್ತು ಶ್ರೀ ಗುರುಗೋವಿಂದ ಶಿವಯೋಗಿ ಇವರ ಅಧ್ಯಯನ ಪೀಠ ಸ್ಥಾಪಿಸುವ ಬಗ್ಗೆ ಕಾರ್ಯದರ್ಶಿಗಳು, ಶ್ರೀ. ಶರೀಫ ಶಿವಯೋಗಿ ಮತ್ತು ಶ್ರೀ.ಗುರುಗೋವಿಂದ ಶಿವಯೋಗಿ, ಪಂಚಾಗ್ನಿಮಠ, ಟ್ರಸ್ಟ(ರಿ) ಶರೀಫಗಿರಿ, ಶಿಶುವಿನಹಾಳ |

**ಕುಲಸಚಿವರು**  **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
| --- | --- |
| | ಇವರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | ಶ್ರೀ. ಶರೀಫ ಶಿವಯೋಗಿ ಮತ್ತು ಶ್ರೀ ಗುರುಗೋವಿಂದ ಶಿವಯೋಗಿ ಇವರ ಅಧ್ಯಯನ ಪೀಠ ಸ್ಥಾಪಿಸುವ ಬಗ್ಗೆ ಶ್ರೀ. ಶರೀಫ ಶಿವಯೋಗಿ ಮತ್ತು ಶ್ರೀ.ಗುರುಗೋವಿಂದ ಶಿವಯೋಗಿ, ಪಂಚಾಗ್ನಿಮಠ, ಟ್ರಸ್ಟ ನವರು ನೀಡಿದ ಮನವಿ ಒಪ್ಪಿ, ಸರ್ಕಾರದಿಂದ ಅಥವಾ ಟ್ರಸ್ಟ ನಿಂದ ಅಧ್ಯಯನ ಪೀಠಕ್ಕೆ ಬೇಕಾದ ರೂ.2.50 ಕೋಟಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪತ್ರ ಬರೆದು, ಟ್ರಸ್ಟ ವತಿಯಿಂದ ಈ ಹಣ ತರಿಸಲು ಪ್ರಯತ್ನ ಮಾಡಲು ಸದರಿಯವರಿಗೆ ತಿಳಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. |
| 21) | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ **ಗ್ರುಪ್ "ಸಿ", "ಸಿ1" (ವಾಹನ ಚಾಲಕರು)** ನೌಕರರಿಗೆ ಕಾರ್ಮಿಕ ಇಲಾಖೆಯ 2026-27ನೇ ಸಾಲಿನ ಪರಿಷ್ಕೃತ ವೇತನವನ್ನು ಪಾವತಿಸಲು ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಮೇರೆಗೆ ಕ್ರಮಕೈಗೊಂಡಿರುವ ವಿಷಯವನ್ನು ದೃಢೀಕರಿಸುವ ಕುರಿತು. |
| ನಿರ್ಣಯ | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ **ಗ್ರುಪ್ "ಸಿ", "ಸಿ1" (ವಾಹನ ಚಾಲಕರು)** ನೌಕರರಿಗೆ ಕಾರ್ಮಿಕ ಇಲಾಖೆಯ 2026-27ನೇ ಸಾಲಿನ ಪರಿಷ್ಕೃತ ವೇತನವನ್ನು ಪಾವತಿಸಲು ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಮೇರೆಗೆ ಕ್ರಮಕೈಗೊಂಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು. |
| 22) | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ **ಗ್ರುಪ್ "ಡಿ"** ನೌಕರರಿಗೆ ಕಾರ್ಮಿಕ ಇಲಾಖೆಯ 2026-27ನೇ ಸಾಲಿನ ಪರಿಷ್ಕೃತ ವೇತನವನ್ನು ಪಾವತಿಸಲು ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಮೇರೆಗೆ ಕ್ರಮಕೈಗೊಂಡಿರುವ ವಿಷಯವನ್ನು ದೃಢೀಕರಿಸುವ ಕುರಿತು. |
| ನಿರ್ಣಯ | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ **ಗ್ರುಪ್ "ಡಿ"** ನೌಕರರಿಗೆ ಕಾರ್ಮಿಕ ಇಲಾಖೆಯ 2026-27ನೇ ಸಾಲಿನ ಪರಿಷ್ಕೃತ ವೇತನವನ್ನು ಪಾವತಿಸಲು ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಮೇರೆಗೆ ಕ್ರಮಕೈಗೊಂಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು. |
| 23) | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ **ಭದ್ರತಾ** ನೌಕರರಿಗೆ ಕಾರ್ಮಿಕ ಇಲಾಖೆಯ 2026-27ನೇ ಸಾಲಿನ ಪರಿಷ್ಕೃತ ವೇತನವನ್ನು ಪಾವತಿಸಲು ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಮೇರೆಗೆ ಕ್ರಮಕೈಗೊಂಡಿರುವ ವಿಷಯವನ್ನು ದೃಢೀಕರಿಸುವ ಕುರಿತು. |

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ **ಭದ್ರತಾ** ನೌಕರರಿಗೆ ಕಾರ್ಮಿಕ ಇಲಾಖೆಯ 2026-27ನೇ ಸಾಲಿನ ಪರಿಷ್ಕೃತ ವೇತನವನ್ನು ಪಾವತಿಸಲು ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಮೇರೆಗೆ ಕ್ರಮಕೈಗೊಂಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು. |
| **24)** | ವಿಶೇಷ ಸಿಂಡಿಕೇಟ್ ಸಭೆಯ ದಿನಾಂಕ 29.05.2026ರ ನಿರ್ಣಯ ಸಂಖ್ಯೆ 03ರಲ್ಲಿ ವಿಶ್ವದ್ಯಾಲಯದಲ್ಲಿಯ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸಗಳ ಶುಲ್ಕವನ್ನು ಹೆಚ್ಚಿಸುವ ಪ್ರಸ್ತಾವನೆ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಅನುಮೋದಿಸಲು ನಿರ್ಣಯಿಸಲಾಯಿತು. ಅದರಂತೆ 2026-27 ನೇ ಸಾಲಿನ ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ ಮತ್ತು ಅಧೀನ ಮಹಾವಿದ್ಯಾಲಯಗಳ ಕೋರ್ಸುಗಳ ಪ್ರವೇಶ ಶುಲ್ಕಗಳನ್ನು ಹೆಚ್ಚಿಸಿದ ಕುರಿತು. |
| **ನಿರ್ಣಯ** | 2026-27 ನೇ ಸಾಲಿನ ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ ಕೋರ್ಸುಗಳ ಮೊದಲನೇ ವರ್ಷದ ಸಾಮಾನ್ಯ ಶುಲ್ಕವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ದಿನಾಂಕ 29.04.2026 ರಂದು ಜರುಗಿದ ಡೀನರ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.<br>ಅದರಂತೆ, 2026-27 ನೇ ಸಾಲಿನ ಎಲ್ಲ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ/ ಡಿಪ್ಲೋಮಾ/ ಅಡ್ವಾನ್ಸ್ ಡಿಪ್ಲೋಮಾ/ ಸರ್ಟಿಫಿಕೇಟ್ ಮತ್ತು ಅಧೀನ ಮಾಹಾವಿದ್ಯಾಲಯಗಳ ಕೋರ್ಸುಗಳ ಪ್ರವೇಶ ಶುಲ್ಕಗಳನ್ನು ಹೆಚ್ಚಿಸಲು ನಿರ್ಣಯಿಸಲಾಯಿತು. |
| **25)** | Ratification of the action taken by the Hon'ble Vice-Chancellor for having relieved Dr.(Smt). Shashirekha Malagi, Assistant Professor, Karnatak University's Sir Siddappa Kambali Law College, Dharwad from her duties to enable her to join to the post of Associate Professor in Central University of Karnataka, Kalaburagi and granted lien for a period of one year on her post of Assistant Professor in Karnatak University's Sir Siddappa Kambali Law College, Dharwad. |
| **ನಿರ್ಣಯ** | Syndicate ratified the decision of relieving Dr.(Smt). Shashirekha Malagi, Assistant Professor, Karnatak University's Sir Siddappa Kambali Law College, Dharwad from her duties to enable her to join to the post of Associate Professor in Central University of Karnataka, Kalaburagi and granted lien for a period of |

**ಕುಲಸಚಿವರು** **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| | one year on her post of Assistant Professor in Karnatak University's Sir Siddappa Kambali Law College, Dharwad. |
| 26) | ಶ್ರೀಮತಿ ಸಿದ್ದಮ್ಮ ಅಂಬಿಗೇರ, ಕನ್ನಡ ಅಧ್ಯಯನ ವಿಭಾಗದ ಪೂರ್ಣಾವಧಿ ಸಂಶೋಧನಾ ವಿದ್ಯಾರ್ಥಿನಿಯಾಗಿದ್ದುಕೊಂಡು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಉಪನ್ಯಸಕರಾಗಿ ಸೇವೆಸಲ್ಲಿಸಿ ಸಂಭಾವನೆ ಪಡೆದ ಬಗ್ಗೆ ಹಾಗೂ ಇದೇ ಅವಧಿಯಲ್ಲಿಯೇ ಯುಆರ್‌ಎಸ್/ಜೆಆರ್‌ಎಫ್ ಶಿಷ್ಯವೇತನ ಪಡೆದ ಬಗ್ಗೆ ವಿಶ್ವವಿದ್ಯಾಲಯಕ್ಕೆ ದೂರು ದಾಖಲಾದ ಹಿನ್ನಲೆಯಲ್ಲಿ ಸತ್ಯಶೋಧನಾ ಸಮಿತಿಯು ನೀಡಿದ ವರದಿಯ ಮೇಲೆ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸಂಶೋಧನಾ ವಿದ್ಯಾರ್ಥಿಗೆ ಮತ್ತು ಸಂಶೋಧನಾ ಮಾರ್ಗದರ್ಶಕರಿಗೆ ನೋಟಿಸ್ ನೀಡಿದ್ದು, ಸದರಿ ವಿದ್ಯಾರ್ಥಿ ಮತ್ತು ಮಾರ್ಗದರ್ಶಕರು ನೋಟಿಸ್‌ಗೆ ನೀಡಿದ ಉತ್ತರವನ್ನು ಪರಿಶೀಲನೆ ಕುರಿತು. |
| **ನಿರ್ಣಯ** | ವಿಶ್ವವಿದ್ಯಾಲಯದಿಂದ ಶ್ರೀಮತಿ ಸಿದ್ದಮ್ಮ ಅಂಬಿಗೇರ, ಅವರು ಹಾಗೂ ಮಾರ್ಗದರ್ಶಕರಿಗೆ ನೀಡಿದ ನೋಟೀಸ್‌ಗೆ ಕೊಟ್ಟ ಉತ್ತರವನ್ನು ಸಿಂಡಿಕೇಟ್ ಪರಿಶೀಲಿಸಿ, ಶ್ರೀಮತಿ. ಸಿದ್ದಮ್ಮ ಅಂಬಿಗೇರ ಅವರು ಮಾಡಿರುವ ತಪ್ಪನ್ನು ಒಪ್ಪಿರುವುದರಿಂದ, ಏಕಕಾಲಕ್ಕೆ Fellowship & ಅತಿಥಿ ಉಪನ್ಯಾಸಕರ ಸಂಭಾವನೆ ಪಡೆದಿದ್ದು, ವಿಶ್ವವಿದ್ಯಾಲಯದಿಂದ ಪಡೆದ ಸಂಭಾವಣೆಯನ್ನು, ವಿಶ್ವವಿದ್ಯಾಲಯಕ್ಕೆ ಅವರು ಒಪ್ಪಿದ ಹಾಗೆ ಮರುಪಾವತಿಸಲು ತಿಳಿಸುವುದು ಹಾಗೂ ಸದರಿಯವರಿಗೆ ಪಿಎಚ್.ಡಿ. ಅವಧಿ ವಿಸ್ತರಣೆಯನ್ನು ನೀಡಬಾರದೆಂದು ಸಿಂಡಿಕೇಟ್ ನಿರ್ಣಯಿಸಿತು. |
| 27) | ಬಿಓಎ ಶಿಫಾರಸ್ಸಿನನ್ವಯ ಕರ್ನಾಟಕ ವಿಶ್ವವಿದ್ಯಾಲಯದ ಬೋಧಕರುಗಳಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಬೋಧಕರುಗಳ ಪದೋನ್ನತಿಯ ವಿಷಯವನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಘಟಕ ಮಹಾವಿದ್ಯಾಲಯಗಳ ಬೋದಕ ಸಿಬ್ಬಂದಿಗಳಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಜೂನ್-2026 ರಲ್ಲಿ ಬಿಓಎ ಮಂಡಳಿಗಳು ಜರುಗಿದ್ದು, ಸದರ ಮಂಡಳಿ ಸಲ್ಲಿಸಿದ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ನಡಾವಳಿಗಳನ್ನು ತೆರೆದು ಓದಲಾಗಿ ಸದರ ನಡಾವಳಿಗಳ ಶಿಫಾರಸ್ಸುಗಳ ಅನ್ವಯ ಪದೋನ್ನತಿ ನೀಡಲು ಕ್ರಮವಹಿಸುವಂತೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.<br>ಮುಂದುವರೆದು, ಪದೋನ್ನತಿ ಹೊಂದಿದ ಬೋಧಕರಿಗೆ ಸ್ಥಾನೀಕರಣ ಸೌಲಭ್ಯವನ್ನು ಸದರಿಯವರು ಸಿ.ಎ.ಎಸ್. ಅಡಿ (Career Advancement Scheme) ಸ್ಥಾನೀಕರಣಕ್ಕೆ ಅರ್ಹತೆ ಹೊಂದಿದ ದಿನಾಂಕದಿಂದ ಅರ್ಹತಾ ಅವಧಿಯನ್ನು ಪರಿಗಣಿಸುವಂತೆ, ಹಾಗೂ ಸ್ಥಾನೀಕರಣಕ್ಕೆ ಸಂಬಂಧಿಸಿದ ವೇತನ ನಿಗದಿಕರಣದ |

**ಕುಲಸಚಿವರು**  **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| | ಆರ್ಥಿಕ ಸೌಲಭ್ಯಗಳನ್ನು ಸ್ಥಾನೀಕರಣ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯವರ್ತಿಯಾಗಿ (The Monetary benefit on grant of CAS shall be Prospective from the date of issue of the order) ಮಂಜೂರು ಮಾಡಲು ಠರಾಯಿಸಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಬಂದ ವಿಷಯಗಳು** | |
| **28)** | ಶ್ರೀ. ಎಸ್.ವಿ. ಹೊಂಡಪ್ಪನವರ, ನಿವೃತ್ತ ಅಧೀಕ್ಷಕರು ಮತ್ತು ಶ್ರೀ. ಎಸ್. ಕುರವತ್ತೆಪ್ಪ, ನಿವೃತ್ತ ಹಿರಿಯ ಸಹಾಯಕರು ಇವರು ಸಲ್ಲಿಸಿದ ಮನವಿಗಳನ್ನು ಪರಿಶೀಲಿಸುವ ಕುರಿತು |
| **ನಿರ್ಣಯ** | ಶ್ರೀ. ಎಸ್.ವಿ. ಹೊಂಡಪ್ಪನವರ, ನಿವೃತ್ತ ಅಧೀಕ್ಷಕರು ಮತ್ತು ಶ್ರೀ. ಎಸ್. ಕುರವತ್ತೆಪ್ಪ, ನಿವೃತ್ತ ಹಿರಿಯ ಸಹಾಯಕರು ಇವರು ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಲು ಈ ಕೆಳಕಾಣಿಸಿದ ಸಮಿತಿಯನ್ನು ರಚಿಸಲಾಗಿದೆ.<br>೧. ಶ್ರೀ ರಾಬರ್ಟ ದದ್ದಾಪುರಿ, ಸಿಂಡಿಕೇಟ್ ಸದಸ್ಯರು - ಅಧ್ಯಕ್ಷರು<br>೨. ಡಾ. ಬಿ.ಎಲ್. ಗುಂಡೂರ, ಸಿಂಡಿಕೇಟ್ ಸದಸ್ಯರು - ಸದಸ್ಯರು<br>೩. ಡೀನರು, ವಿಜ್ಞಾನ & ತಂತ್ರಜ್ಞಾನ ನಿಖಾಯ - ಸದಸ್ಯರು<br>೪. ಉಪಕುಲಸಚಿವರು, ಡಿಪಿಎಆರ್ ವಿಭಾಗ - ಸಂಚಾಲಕರು<br>ಅದರಂತೆ, ಸಮಿತಿ ರಚಿಸಿ ಮುಂದಿನ ಕ್ರಮವಹಿಸಲು ಸಿಂಡಿಕೇಟ್ ಠರಾಯಿಸಿತು. |

-

-

-

-

-

-

-

-

-

-

-

-

ಕುಲಸಚಿವರು



ಕುಲಪತಿಗಳು